# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.

## ಸಿ.ಸಿ. ಸಂಖ್ಯೆ 620/2014

**ಸಾಕ್ಷಿಯನ್ನು ದಿಃ 12.10.2022 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಮಧುಸೂದನ್ | ಸಿಡಬ್ಲ್ಯೂಃ 12 ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಅನಂತರಾಮ್ | |
| ವಯಸ್ಸು | 45 ವರ್ಷ | |
| ಕೆಲಸ | ಬ್ಯಾಂಕ್ ಮ್ಯಾನೇಜರ್<br>ಕರ್ನಾಟಕ ಬ್ಯಾಂಕ್ | |
| ವಾಸಸ್ಥಳ | ಬ್ರಹ್ಮಾವರ | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು ದಿಃ17.05.2010 ರಿಂದ 07.04.2014 ರ ವರೆಗೆ ನಾನು ಕರ್ನಾಟಕ ಬ್ಯಾಂಕ್, ಹುಣಸೂರು ಶಾಖೆಯಲ್ಲಿ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 12.08.2010 ರಂದು ನಮ್ಮ ಶಾಖೆಯ ಆರ್ ಟಿ ಜಿ ಎಸ್ ಬ್ರಾಂಚ್ ನ ಗುಮಾಸ್ತೆಯಾದ ರಮ್ಯ ಅವರು ನನಗೆ ಡೆಬಿಟ್ ಸ್ಲಿಪ್ ಮತ್ತು ಆರ್ ಟಿ ಜಿ ಎಸ್ ಚಲನ್ ತಂದು ನನಗೆ ನೀಡಿರುತ್ತಾರೆ. ಅದನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಅಕೌಂಟ 762541 ಚೆಕ್ ನಂ.985920 ಮೊತ್ತ 25 ಲಕ್ಷ ಹೆಸರು ಡಿ ವೈ ಉಪ್ಪಾರ್ ಎಂದು ನಮೂದಿಸಲಾಗಿರುತ್ತದೆ. ಆರ್ ಟಿ ಜಿ ಎಸ್ ಚಲನ್ ನಲ್ಲಿ ಹಣ ಯಾರಿಂದ ಯಾರಿಗೆ ವರ್ಗಾವಣೆ ಆಗಬೇಕು ಅವರ ಅಕೌಂಟ್ ನಂ., ರೆಫೆರೆನ್ಸ್ ನಂಬರ್ ಎಸ್.ಡಿ. ಅಕೌಂಟ್ ನಂಬರ್1660739 ಎಂದು ನಮೂದಾಗಿರುತ್ತದೆ. ಆದರೆ ಡೆಬಿಟ್ ಸ್ಲಿಪ್ ನಲ್ಲಿ ಹಾಗೂ ಆರ್ ಟಿ ಜಿ ಎಸ್ ಚಲನ್ ನಲ್ಲಿ ಖಾತೆದಾರರ ಸಹಿ ಇರುವುದಿಲ್ಲ. ಇದನ್ನು ಕೇಳಿದಾಗ ಮ್ಯಾನೇಜರ್ ಅವರಾದ ಆರೋಪಿ ಬಾಲಸುಬ್ರಹ್ಮಣ್ಯ ಭಟ್ ಅವರು ಚೆಕ್ ಹಾಗೂ ಆರ್ ಟಿ ಜಿ ಎಸ್ ಚಲನ್ ನಲ್ಲಿ ಸಹಿ ಮಾಡಿಸಿ ಕೊಡುತ್ತೇನೆಂದು ತಿಳಿಸಿರುತ್ತಾರೆ. ಅವರ ಆದೇಶದಂತೆ ಮಂಡ್ಯ ಶಾಖೆಯಲ್ಲಿರುವ ಶ್ರದ್ಧಾ ಎಂಟರ್ಪ್ರೈಸಸ್ ಎಂಬ ಅಕೌಂಟ್ ಗೆ 25 ಲಕ್ಷ ವರ್ಗಾವಣೆ ಮಾಡಿರುತ್ತೇನೆ. ಇದರ ಬಗ್ಗೆ ಸುಮಾರು ಬಾರಿ ವಿಚಾರಿಸಿದಾಗ ಸಹಿ ಮಾಡಿದ ಚೆಕ್ ಹಾಗೂ ಚಲನ್ ಅನ್ನು ತರಿಸಿಕೊಡುತ್ತೇನೆ ಎಂದು ಆರೋಪಿ ಹೇಳುತ್ತಿದ್ದರು.

ದಿಃ 11.08.2010 ರಂದು ನಮ್ಮ ಬಿಜಾಪುರ ಶಾಖೆಯಿಂದ ಡಿ ವೈ ಉಪ್ಪಾರ್ ಅವರ ಒಡಿ ಅಕೌಂಟ್ ಸಂ.168 ಇಂದ 25 ಲಕ್ಷ ನಮ್ಮ ಹುಣಸೂರು ಖಾತೆ 762541 ಗೆ ವರ್ಗಾವಣೆ ಆಗಿರುತ್ತದೆ.

ಅದೇ ಮೊತ್ತವನ್ನು ಶ್ರದ್ಧಾ ಎಂಟರ್ಪ್ರೈಸಸ್ ಅಕೌಂಟ್ ಗೆ ಆರ್ ಟಿ ಜಿ ಎಸ್ ಮಾಡಿರುತ್ತೇನೆ. 06.03.2012 ರಿಂದ 10.03.2012 ರವರೆಗೆ ಪ್ರಧಾನ ಕಛೇರಿಯಿಂದ ಚೀಫ್ ಮ್ಯಾನೇಜರ್ ಪ್ರಫುಲ್ ಚಂದ್ರ ಮತ್ತು ಶ್ರೀನಿವಾಸ ಭಟ್ ಎಂಬುವವರು ತನಿಖೆಗೆ ಬಂದಿರುತ್ತಾರೆ. ಆಗ ತಿಳಿದು ಬಂದ ವಿಷಯವೇನೆಂದರೆ ನಮ್ಮ ಶಾಖೆಯಲ್ಲಿ ರಾಜಮ್ಮ ಎಂಬ ಹೆಸರಿನ 764262 ಅಕೌಂಟ್ ಇದ್ದು ಅವರು ವಿವಿಧ ಬಗೆಯ ಬೆಳೆ ಹಾಗೂ ಕಂತಿನ ಸಾಲ ಪಡೆದಿರುತ್ತಾರೆ. ಸದರಿಯವರು ಕಬ್ಬು ಬೆಳೆಗಾರರಾಗಿದ್ದು ಅವರು ತಾವು ಬೆಳೆದ ಕಬ್ಬನ್ನು ಮೈಸೂರಿನ ನಂಜನಗೂಡ ತಾ, ಬನ್ನಾರಿಯಮ್ಮ ಎಂಬ ಶುಗರ್ ಫ್ಯಾಕ್ಟರಿಗೆ ಮಾರಾಟ ಮಾಡುತ್ತಿದ್ದರು.

ದಿಃ 07.07.2010 ರಂದು ಅಂದಿನ ಆರೋಪಿ ಸದರಿ ಶುಗರ್ ಫ್ಯಾಕ್ಟರಿಗೆ ಲೆಟರ್ ಬರೆದು ಹುಣಸೂರು ಶಾಖೆಯ ಖಾತೆಗೆ ನೇರವಾಗಿ ಹಣ ಜಮಾ ಮಾಡುವಂತೆ ಕೋರಿದ್ದರು. 07.12.2010 ರಂದು ಎಸ್ ಬಿ ಎಮ್ ನಂಜನಗೂಡು ಶಾಖೆಯವರು 57,783/- ರೂ. ಹಣವನ್ನು ನಮ್ಮ ಶಾಖೆಗೆ ನೀಡಿರುತ್ತಾರೆ. ಸದರಿ ಚೆಕ್ ಮತ್ತು ಚಲನ್ ತುಂಬುವ ರಶೀದಿ, ಹಣ ತೆಗೆಯುವ ರಶೀದಿ ಎಲ್ಲವನ್ನು ಸಹಿ ಮಾಡಿ ಸದರಿ ಮ್ಯಾನೇಜರ್ ಅಂದರೆ ಆರೋಪಿಗೆ ಕೊಟ್ಟಿರುತ್ತಾರೆ. ಆದರೆ ಖಾತೆಯ ಜಮಾ 764009 ರಾಜಮ್ಮ ಕೋಂ ಶಿವೇಗೌಡ ಅವರ ಅಕೌಂಟ್ ಗೆ 57,250/-ರೂ. ಹಣ ಜಮಾ ಆಗಿದ್ದು 2312.2010 ರಂದು 55,000/- ರೂ. ಹಣ 18.01.2011 ರಂದು 2,250/- ರೂ. ಹಣ ದುರುಪಯೋಗ ಆಗಿರುತ್ತದೆ. ಆದರೆ ಚೆಕ್ ನೀಡಿದ ರಾಜಮ್ಮ ಕೋಂ ಜಗನ್ ನಾಥರಾವ್ ಅವರು ಹಣ ಜಮಾ ಆಗಿರುವ ಖಾತೆದಾರ ರಾಜಮ್ಮ ಕೋಂ ಶೀವೇಗೌಡ ಇವರು ಬೇರೆ ಬೇರೆ ವ್ಯಕ್ತಿಗಳಾಗಿರುತ್ತಾರೆ.

ವರದರಾಜು ಅವರು ನಮ್ಮ ಹುಣಸೂರು ಶಾಖೆಯಲ್ಲಿ 11,25,000/- ಬೇರೆ ಬೇರೆ ವಿಧವಾದ ಸಾಲ ಪಡೆದಿರುತ್ತಾರೆ. 03.02.201 1 ರಂದು ಸದರಿ ವರದರಾಜು ಅವರು ಅಂದಿನ ಮ್ಯಾನೇಜರ್ ಆದ ಆರೋಪಿಗೆ 3 ಲಕ್ಷ ನೀಡಿದ್ದು ತನ್ನ ಲೋನ್ ಅಕೌಂಟ್ ಗೆ ಜಮಾ ಮಾಡಲು ಕೋರಿರುತ್ತಾರೆ. ದಿಃ 31.05.2011 ರಂದು 2,64,000/- ರೂ. ಮೈಸೂರಿನ ಕುವೆಂಪುನಗರ ಶಾಖೆಯಿಂದ ಬೇರೆ ಬೆರೆ ಅಕೌಂಟ್ ಗೆ ಜಮಾ ಆಗಿರುತ್ತದೆ. ಅದರಲ್ಲಿ 36,000/- ರೂ. ದುರ್ಬಳಕೆ ಆಗಿರುತ್ತದೆ.

ಹುಣಸೂರು ಬೈಪಾಸ್ ರಸ್ತೆಯಲ್ಲಿರುವ ಕೆಫೆ ಕೂರ್ಗ್ ಮಾಲೀಕರಾದ ಕಾಳಪ್ಪಗೌಡ ಅವರಿಗೆ ಕಾರ್ ಲೋನ್ ಗೆಂದು ಆರೋಪಿ ಸಾಲ ನೀಡಿರುತ್ತಾರೆ. ಆದರೆ ಬ್ಯಾಂಕಿಗೆ ಇನ್ ವಾಯ್ಸ್ ಪ್ರತಿ, ರಶೀದಿ, ಡುಪ್ಲಿಕೇಟ್ ಬೀಗ, ಇನ್ಸೂರೆನ್ಸ್ ಪ್ರತಿ , ಹೈಪೋಥಿಕೇಷನ್ ಪ್ರತಿ ಯಾವುದು ಆಗಿರುವುದಿಲ್ಲ. ಬ್ಯಾಂಕಿನ ತನಿಖಾಧಿಕಾರಿಗಳು ಈ ಬಗ್ಗೆ ಕೇಳಿದಾಗ ಸದರಿ ಕೆಫೆ ಕೂರ್ಗ್ ಮಾಲೀಕರಾದ ಕಾಳಪ್ಪಗೌಡ ತಾವು ಯಾವುದೇ ಕಾರ್ ಲೋನ್ ತೆಗೆದುಕೊಂಡಿಲ್ಲ ಎಂದು ತಿಳಿಸಿರುತ್ತಾರೆ. ಇದರ ಬಗ್ಗೆ ಕೆ ವೈ ಸಿ ನಾರ್ಮ್ಸ್

:

ಮತ್ತು ಬ್ಯಾಂಕಿನ ಸಾಲದ ನಿಯಮಗಳನ್ನು ಮ್ಯಾನೇಜರ್ ಆದ ಆರೋಪಿ ಉಲ್ಲಂಘನೆ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ.

ಡಿ.ವೈ. ಉಪ್ಪಾರ್ ಅವರ 25 ಲಕ್ಷ ಹಣ, ರಾಜಮ್ಮ ಕೋಂ ಜಗನ್ನಾಥ ರಾವ್ ಅವರ 57,250/- ರೂ., ವರದರಾಜು ಅವರ 36,000/- ಒಟ್ಟಾಗಿ 25,93,250/- ಹಣ ದುರ್ಬಳಕೆ ಆಗಿರುವುದು ಕಂಡುಬಂದಿರುತ್ತದೆ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ರಾಜಮ್ಮ ಕೋಂ ಜಗನ್ನಾಥ ರಾವ್ ಅವರ ಕೋರಿಕಾ ಬರವಣಿಗೆಗೆ ಸಂಬಂಧಪಟ್ಟ ಮಹಜರ್ ಆಗಿದ್ದು ಅದನ್ನು ನಿಪಿ.89 ಎಂದು ಸಾಕ್ಷಿಯ ಸಹಿಯನ್ನು ನಿಪಿ.89 ಎ ಎಂದು ಗುರುತಿಸಲಾಯಿತು. ಸದರಿ ಮಹಜರ್ಗೆ ನಾನು ದಿಃ09.01.2013 ರಂದು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನನ್ನ ಸಮಕ್ಷಮ 8 ಹಾಳೆಯಲ್ಲಿ ರಾಜಮ್ಮ ಕೋಂ ಜಗನ್ನಾಥ ರಾವ್ ಅವರ 8 ಸಹಿಗಳನ್ನು ಪಡೆದು ಸದರಿ ಹಾಳೆಗಳಿಗೆ ಆರ್ -1 ಇಂದ ಆರ್-8 ಹಾಗೂ ಸಹಿಗಳಿಗೆ ಆರ್ -1 ಎ ಇಂದ ಆರ್ -1 ಹೆಚ್ ನಮೂದು ಮಾಡಿ ಸಂಜೆ 5 ರಿಂದ 6 ರವರೆಗೆ ಮಹಜರ್ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ.

ಸದರಿ 8 ಹಾಳೆಗಳನ್ನು ನಿಪಿ.90 ರಿಂದ ನಿಪಿ.97 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 90 ಎ ರಿಂದ ನಿಪಿ.97 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ</u>

ಆರೋಪಿ ಪರ ವಕೀಲರನ್ನು ಕೂಗಿಕರೆಯಿಸಲಾಗಿ, ಶ್ರೀಮತಿ ಪಿ ಜೆ ಅವರು ಹಾಜರಿದ್ದು ಪಿ ಎಲ್ ಕೆ ವಕೀಲರು ದೆಹಲಿಗೆ ತೆರಳಿರುವುದಾಗಿ ತಿಳಿಸಿದ್ದು ಭತ್ಯೆ ಮೇರೆಗೆ ಕಾಲಾವಾಕಾಶ ನೀಡಲು ಕೋರಿದ್ದಕ್ಕೆ 2,500/- ಭತ್ಯೆಮೇಲೆ ಪಾಟೀಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.